ಪ್ರದೇಶವನ್ನು ಗ್ರಾಮಪಂಚಾಯತ್ ಆಗಿ ಪರಿವರ್ತಿಸಿ ತಕ್ಷಣ ಚುನಾವಣೆ ನಡೆಸಿ ಜನರ ಕೈಗೆ ಅಧಿಕಾರ ಕೊಡಬೇಕಾಗಿ ರಾಜ್ಯ ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಸೋಮೇಶ್ವರ ಗ್ರಾಮವು ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ 1983 ರಡಿಯಲ್ಲಿ ಮಂಡಲ ಪಂಚಾಯಿತಿಯಾಗಿ ರಚನೆಗೊಂಡಿತ್ತು. ಸದರಿ ಪ್ರದೇಶವು ನಗರ ಪ್ರದೇಶವಾಗಿ ಪರಿವರ್ತನೆಗೊಳ್ಳಲು ಅರ್ಹತೆ ಹೊಂದಿದ್ದರಿಂದ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯು ತನ್ನ ಅಧಿಸೂಚನೆ ಸಂ.ವನಇ:150:ಎಂಎನ್‌ಇ 93(12) ದಿನಾಂಕ 25-3-94 ರಲ್ಲಿ ಕರ್ನಾಟಕ ಪುರಸಭೆಗಳ ಕಾಯ್ದೆ 1964 ರ ಕಲಂ 349 ರನ್ವಯ ಅಧಿಸೂಚಿತ ಪ್ರದೇಶ ಸಮಿತಿಯನ್ನಾಗಿ ಘೋಷಿಸಿತು. ಈ ಪ್ರಕ್ರಿಯೆ ಜಾರಿಯಲ್ಲಿದ್ದರಿಂದ ಡಿಸೆಂಬರ್ 29, 1993 ರಲ್ಲಿ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳ ಚುನಾವಣೆ ನಡೆದಾಗ ಸೋಮೇಶ್ವರ ಗ್ರಾಮಕ್ಕೆ ಗ್ರಾಮ ಪಂಚಾಯಿತಿಯನ್ನು ರಚಿಸಿರಲಿಲ್ಲ.

ನಂತರ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಆಗಸ್ಟ್ 1995 ರಲ್ಲಿ ಸೋಮೇಶ್ವರ ಅಧಿಸೂಚಿತ ಪ್ರದೇಶವನ್ನು ಗ್ರಾಮ ಪಂಚಾಯಿತಿಯಾಗಿ ಪರಿವರ್ತಿಸುವ ಬಗ್ಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿತ್ತು. ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸೋಮೇಶ್ವರ ಗ್ರಾಮವು 15928 ಜನಸಂಖ್ಯೆ ಹೊಂದಿದ್ದು, ಜನಸಾಂದ್ರತೆ ಪ್ರತಿ ಚದರ ಕಿಲೋ ಮೀಟರಿಗೆ 1986, ವಾರ್ಷಿಕ ಆದಾಯ ರೂ. 1.30 ಲಕ್ಷ ಮತ್ತು ಕೃಷಿಯೇತರ ಕಾರ್ಮಿಕರ ಸಂಖ್ಯೆ ಶೇ:95 ಇರುವುದರಿಂದ ಗ್ರಾಮವನ್ನು ಗ್ರಾಮ ಪಂಚಾಯಿತಿಯಾಗಿ ಪರಿವರ್ತಿಸುವುದು ಸಮಂಜಸವಾಗಿರುವುದಿಲ್ಲವೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನಗರಾಭಿವೃದ್ಧಿ ಇಲಾಖೆಗೆ ಸೂಚಿಸಿತ್ತು. ನಗರಾಭಿವೃದ್ಧಿ ಇಲಾಖೆಯು ಈ ಸೂಚನೆಯನ್ನು ಪರಿಗಣಿಸಿ ಸೋಮೇಶ್ವರ ಗ್ರಾಮವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲು ದಿನಾಂಕ 23-10-96 ರಂದು ತನ್ನ ಒಪ್ಪಿಗೆ ನೀಡಿತ್ತು. ಪುನಃ ನಗರಾಭಿವೃದ್ಧಿ ಇಲಾಖೆಯು ತನ್ನ ದಿನಾಂಕ 21-1-97 ರ ಟಿಪ್ಪಣಿಯಲ್ಲಿ ದಕ್ಷಿಣಕನ್ನಡ ಗಂಗೊಳ್ಳಿ ಸೋಮೇಶ್ವರ, ಪುದು ಗ್ರಾಮಗಳನ್ನು ಗ್ರಾಮ ಪಂಚಾಯಿತಿಗಳನ್ನಾಗಿ ಪರಿವರ್ತಿಸಲು ಪುನರ್ ಪರಿಶೀಲಿಸಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ಕೋರಿರುತ್ತದೆ. ಸದರಿ ಪ್ರಸ್ತಾವನೆಯನ್ನು, ನಿಯಮಾನುಸಾರ ಪರಿಶೀಲಿಸಲಾಗುತ್ತಿದ್ದು, ಈ ಬಗ್ಗೆ ಸಧ್ಯದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ವಿಷಯ: (ಎ) ಕಂಕನಾಡಿ ವಿದ್ಯುತ್ ಸಬ್‌ಸ್ಟೇಷನ್ ಬಗ್ಗೆ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು): ಕಳೆದ ವಿಧಾನ ಸಭೆಯಲ್ಲಿ ವಿದ್ಯುತ್ ಸಚಿವರು ಆಶ್ವಾಸನೆ ಕೊಟ್ಟರೂ ಇನ್ನು ಕಂಕನಾಡಿ ವಿದ್ಯುತ್ ಸಬ್ ಸ್ಟೇಷನ್ ಹಾಗೂ ನೆಹರು ಉದ್ಯಾನವನದ ಹತ್ತಿರವಿರುವ ವಿದ್ಯುತ್ ಸಬ್‌ಸ್ಟೇಷನ್ ಮಾಡದೇ ಇರುವುದರಿಂದ ಮಂಗಳೂರು ನಗರದ ಜನತೆಗೆ ಆಗಿರುವ ತೊಂದರೆಯನ್ನು ಸರ್ಕಾರದ ಗಮನ ಸೆಳೆದು, ತುರ್ತಾಗಿ ಕಾರ್ಯವನ್ನು

ಕೈಗೊಂಡು ಯಾವಾಗ ಪೂರ್ಣಗೊಳಿಸುತ್ತಿರೆಂಬುದರ ಬಗ್ಗೆ ಸ್ಪಷ್ಟ ವಿವರಣೆ ನೀಡಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪೂರ್ (ವಿದ್ಯುತ್ ರಾಜ್ಯ ಸಚಿವರು):

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಮಂಗಳೂರಿನ ಕಂಕನಾಡಿ ಮತ್ತು ನೆಹರೂ ಮೈದಾನಗಳಲ್ಲಿ ಮಂಗಳೂರು ಅರ್ಬನ್ ಡಿಸ್ಟ್ರಿಬ್ಯೂಷನ್ ಇಂಪ್ರೂವ್‌ಮೆಂಟ್ ಸ್ಕೀಂನಡಿಯಲ್ಲಿ (ಯು.ಡಿ.ಐ.ಎಸ್) 33 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ಗಳನ್ನು ನಿರ್ಮಾಣ ಮಾಡುತ್ತಿದೆ. ಈ ವಿದ್ಯುತ್ ಸಬ್-ಸ್ಟೇಷನ್‌ಗಳ ನಿರ್ಮಾಣ ಮತ್ತು ಇವುಗಳಿಗೆ ಸಂಬಂಧಿಸಿದ ಭೂಗತ ಕೇಬಲ್ಲುಗಳನ್ನು ಹಾಕುವುದು ಈ ಕಾರ್ಯಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ ಸುಮಾರು 691 ಲಕ್ಷ ರೂ.ಗಳು.

ಕುಲಶೇಖರದಿಂದ ಕಂಕನಾಡಿಗೆ ಮತ್ತು ಮಂಗಳಾ ಸ್ಟೇಡಿಯಂನಿಂದ ನೆಹರೂ ಮೈದಾನಕ್ಕೆ 33 ಕೆ.ವಿ. ಭೂಗತ ಕೇಬಲ್ಲುಗಳನ್ನು ಹಾಕುವ ಕೆಲಸ ಮುಗಿದಿದೆ. ಔಟ್‌ಡೋರ್ ಸ್ವಕ್ಚರ್ ಸಾಮಗ್ರಿಗಳನ್ನು ಸರಬರಾಜು ಮಾಡುವಲ್ಲಿ ಉಂಟಾದ ವಿಳಂಬದಿಂದಾಗಿ, ಹಮ್ಮಿಕೊಂಡ ಕಾರ್ಯಕ್ರಮದಂತೆ ಕಂಕನಾಡಿ ಮತ್ತು ನೆಹರೂ ಮೈದಾನಗಳ 33 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ಗಳ ನಿರ್ಮಾಣವನ್ನು ನಿರ್ವಹಿಸಲಾಗಲಿಲ್ಲ. ಸುಮಾರು ಒಂದು ತಿಂಗಳ ಹಿಂದೆ ಔಟ್‌ಡೋರ್ ಸ್ವಕ್ಚರ್ ಸಾಮಗ್ರಿಗಳ ಸರಬರಾಜಾಗಿದ್ದು, ಈಗ ನಿರ್ಮಾಣ ಕಾರ್ಯಗಳು ಪೂರ್ಣರೀತಿಯಲ್ಲಿ ಸಾಗುತ್ತಿದೆ. ಎಲ್ಲಾ ಸಾಮಗ್ರಿಗಳು ಲಬ್ಯವಿದೆ. ಈ ಎರಡೂ ಸ್ಟೇಷನ್‌ಗಳ ನಿರ್ಮಾಣ ಕಾರ್ಯಗಳನ್ನು ಜೂನ್ 97 ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಅಧ್ಯಕ್ಷರು: ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು, 17 ಮತ್ತು 18 ರಂದು 351 ರಲ್ಲಿ ಮಾನ್ಯ ಸದಸ್ಯರಾದ ಸಭಾಪತಿಯವರು ಕೇಳಿರುವ ಪ್ರಶ್ನೆಗೆ ಉತ್ತರ ಬಂದಿಲ್ಲ. ದಯಮಾಡಿ, ತರಿಸಿ ಅವರಿಗೆ ಕಳುಹಿಸಿಕೊಡಬೇಕೆಂದು ಸೂಚನೆ ಕೊಡುತ್ತಿದ್ದೇನೆ. ಈಗ ವಿಧೇಯಕಗಳ ಮಂಡನೆಯನ್ನು ತೆಗೆದುಕೊಳ್ಳೋಣ.

5 ಶಾಸನ ರಚನೆ:

(ಅ) ವಿಧೇಯಕಗಳ ಮಂಡನೆ

(ಆ) ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ